ಸಾಕ್ಷಿಯನ್ನು 04.11.2022 ರಂದು ಕರೆಸಿ ಪ್ರಮಾಣವಚನ ಮಾಡಿಸಲಾಯಿತು. ಡಿ.ಡಬ್ಲ್ಯೂ-2

ಪಾಟೀ ಸವಾಲುಃ ವಾದಿಪರ ವಕೀಲರಿಂದಃ

1. ನನ್ನ ತಂದೆಗೆ ಒಟ್ಟು 6 ಜನ ಮಕ್ಕಳು. ಅವರಲ್ಲಿ 3 ಜನ ಗಂಡುಮಕ್ಕಳು ಹಾಗೂ 3 ಜನ ಹೆಣ್ಣುಮಕ್ಕಳು. ಅವರ ಹೆಸರು ಕಾಳಯ್ಯ , ಶಿವಮಲ್ಲಯ್ಯ , ಮೂರನೆಯವರು ನಾಗರಾಜು ಎಂದರೆ ನಾನು. ಗಂಗಮ್ಮ, ಚಿಕ್ಕತಾಯಮ್ಮ , ಹಾಗೂ ಗೌರಮ್ಮ. ಗಂಗಮ್ಮ ಅಂದರೆ ಪ್ರತಿವಾದಿಯ ಗಂಡನ ಹೆಸರು ಬೀರಯ್ಯ. 1ನೇಪ್ರತಿವಾದಿಗಳಿಗೆ 3 ಜನ ಗಂಡು ಮಕ್ಕಳು. ಅವರ ಹೆಸರು ಬೀರಯ್ಯ , ಆನಂದ , ಲೋಕೇಶ ಅಂದರೆ ಪ್ರತಿವಾದಿ 2 ರಿಂದ 4. ಈ ದಾವೆಯ ವಾದಿ ಯಾರು ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ನನ್ನ ಅಕ್ಕ ಎಂದರೆ ಸರಿ. ದಾವಾ ಆಸ್ತಿ ಕೊಂಡದಮ್ಮನಪುರ ಗ್ರಾಮದಲ್ಲಿ ಇದೆ. 1ನೇ ಪ್ರತಿವಾದಿಗೆ ಮದುವೆ ಮಾಡಿಕೊಟ್ಟ ನಂತರ ಅವರು ಕಾಡನಪುರದ ದೊಡ್ಡಿ ಅಂದರೆ ನನ್ನ ಹುಟ್ಟೂರಿನಲ್ಲೆ ಇದ್ದರು , ನಂತರ ನಾನು ಮತ್ತು 1ನೇ ಪ್ರತಿವಾದಿ ಮತ್ತು ಅವರ ಕುಟುಂಬ ಕೊಂಡದಮ್ಮನಪುರ ಗ್ರಾಮಕ್ಕೆ ಬಂದಿರುತ್ತೇವೆ. ಕೊಂಡದಮ್ಮನಪುರ ಗ್ರಾಮಕ್ಕೆ ಬಂದ

ನಂತರ ನಾವು ನಮ್ಮ ಜಮೀನಿನಲ್ಲಿ ಮನೆ ಕಟಿಟಕೊಂಡು ವಾಸ ಮಾಡಿಕೊಂಡಿದ್ದೇವೆ , 1ನೇ ಪ್ರತಿವಾದಿ ಮತ್ತು ಅವರ ಕುಟುಂಬದ ಅವರ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅಲ್ಲಿ ಇರುವ ಮನೆಯ ಜಾಗಕ್ಕೆ ಮನೆ ನಂಬರು ಇಲ್ಲ ಆದರೆ ಜಮೀನಿನ ಸರ್ವೆ ನಂಬರು ಇರುತ್ತದೆ. ಮನೆಯನ್ನು ಕಟ್ಟಬೇಕಾದರೆ ಪರವಾನಗಿಯನ್ನು ತೆಗೆದುಕೊಂಡಿರುವುದಿಲ್ಲ. ಸದರಿ ಮನೆ ಪಂಡಿತಹಳ್ಳಿ ಪಂಚಾಯಿತಿಗೆ ಬರುತ್ತದೆ. ಪಂಡಿತಹಳ್ಳಿ ಪಂಚಾಯಿತಿ ದಾಖಲೆಗಳಲ್ಲಿ ನಮ್ಮ ಮನೆಯ ಖಾತೆ ನಂಬರು ಇರುವುದಿಲ್ಲ. ನನ್ನ ಪಡಿತರ ಚೀಟಿ ಕೊಂಡದಮ್ಮನಪುರ ಗ್ರಾಮದಲ್ಲಿ ಇದೆ. ಸದರಿ ಪಡಿತರ ಚೀಟಿ ಹೆಬ್ಬಣಿ ಗ್ರಾಮಕ್ಕೆ ಸೇರಿರುತ್ತದೆ. ನನ್ನ ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

2. 1ನೇ ಪ್ರತಿವಾದಿ ತಮ್ಮ ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೊ ಇಲ್ಲವೊ ನನಗೆ ಗೊತ್ತಿಲ್ಲ. ಕೊಂಡದಮ್ಮನಪುರ ಗ್ರಾಮದಲ್ಲಿ ನಮ್ಮ ಜಮೀನು ಇರುವ ಬಗ್ಗೆ ನಾನು ಪಹಣಿಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಅಣ್ಣ ಶಿವಮಲ್ಲಯ್ಯನ ವಿರುದ್ದ ನಾನು ಜಮೀನಿನಲ್ಲಿ ಭಾಗ ಕೇಳಿ ಒಂದು ದಾವೆಯನ್ನು ಹಾಕಿದ್ದೆ ಎಂದರೆ ಸರಿ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ನಾನು ಸರ್ವೆ ನಂ.370/ಪಿ80 ಜಮೀನು 4 ಎಕರೆಗೆ ಸಂಬಂದಪಟ್ಟಂತೆ ಹಾಕಿದ್ದೆ. ಸದರಿ ಜಮೀನು ದಾಖಲೆಯ ಪ್ರಕಾರ ಬೆಳಕವಾಡಿ ಗ್ರಾಮಕ್ಕೆ ಸೇರಿರುತ್ತದೆ ಆ ಜಮೀನಿಗೆ ಸಂಬಂದಪಟ್ಟಂತೆ ನಾನು ದಾವೆಯನ್ನು ಹಾಕಿದ್ದೆ. ಸದರಿ ದಾವೆ ವಜಾ ಆಗಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿಯ ಜಮೀನು ದಾಖಲೆ ಪ್ರಕಾರ ಬೆಳಕವಾಡಿ ಗ್ರಾಮಕ್ಕೆ ಸೇರಿರುತ್ತದೆ. 1ನೇ ಪ್ರತಿವಾದಿ ಮನೆ ಕಟ್ಟಿಕೊಂಡಿರುವ ಜಮೀನು ದಾಖಲೆ ಪ್ರಕಾರ ಬೆಳಕವಾಡಿ ಗ್ರಾಮಕ್ಕೆ ಸೇರಿರುತ್ತದೆ. ಸಾಕ್ಷಿ ಮುಂದುವರಿದು ನಾವು ಇರುವ ಮನೆಯ ಜಾಗ ಕೊಂಡದಮ್ಮನಪುರಕ್ಕೆ ಸೇರಿದೆ ಎಂದು ಸರ್ಕಾರದಿಂದ ಆದೇಶ ಆಗಿರುತ್ತದೆ. ಸದರಿ ಜಮೀನು ನಮ್ಮ ಕುಟುಂಬಕ್ಕೆ ಸರ್ಕಾರದ ಮೂಲಕ ಮಂಜೂರಾಗಿ ಬಂದಿರುತ್ತದೆ. ಸದರಿ ಜಮೀನನ್ನು ಬಿಟ್ಟು ಬೇರೆ ಯಾವುದೆ ಜಮೀನು ನಮ್ಮ ಕುಟುಂಬಕ್ಕೆ ಸರ್ಕಾರದಿಂದ ಮಂಜೂರಾಗಿರುವುದಿಲ್ಲ. ನಾನು ಹಾಕಿದ್ದ ದಾವೆ ವಜಾ ಆಗಿದ್ದರು ಕೂಡ ನಾನು ಅಲ್ಲೇ ವಾಸ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಬಲ್ ಆಪರೇಟರ್ ಆಗಿ ಬೆಂಗಳೂರಿನಲ್ಲಿ ವಾಸ ಇದ್ದೇನೆ ಎಂದರೆ ಸರಿಯಲ್ಲ. ಯಾವತ್ತು ಕೂಡ ನಾನು ಕೊಂಡದಮ್ಮನಪುರದಲ್ಲಿ ಅಥವಾ ಬೆಳಕವಾಡಿ ಜಮೀನಿನಲ್ಲಿ ವಾಸ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರಿದು 1980 ರಿಂದ ಇವತ್ತಿನವರೆಗು ನಾನು ಕೊಂಡದಮ್ಮನಪುರದಲ್ಲಿ ಇರುವ ಮನೆಯಲ್ಲೆ ವಾಸ ಮಾಡಿಕೊಂಡಿದ್ದೇನೆ.

3. 3 ನೇಪ್ರತಿವಾದಿ ಮದ್ದೂರು ನಾಯಾಲಯದಲ್ಲಿ ದಾವೆ ಸಂಖ್ಯೆ 440/2022 ರಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು 3 ನೇ ಪ್ರತಿವಾದಿ ನನ್ನ ಅಣ್ಣಂದಿರಾದ ಕಾಳಯ್ಯ, ಶಿವಮಲ್ಲಯ್ಯ ಹಾಗೂ ನನ್ನವಿರುದ್ದ ಹಾಕಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ಭಾಗಕೊಡಿ ಎಂದು ಸದರಿ ದಾವೆಯನ್ನು ಹಾಕಿರುತ್ತಾರೆ. 3 ನೇ ಪ್ರತಿವಾದಿಯ ತಂದೆ ತಾಯಿ ಗಂಗಮ್ಮ ಹಾಗೂ ಬೀರಯ್ಯ. 3 ನೇಪ್ರತಿವಾದಿ ಸದರಿ ದಾವೆಯಲ್ಲಿ 2 ನೇ ಪ್ರತಿವಾದಿ ಈಗ ತೀರಿಕೊಂಡಿರುತ್ತಾರೆ. ಅವರ ವಾರಸುದಾರರನ್ನು ದಾವೆ ಸಂಖ್ಯೆ 440/2022 ರಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನಾನು ನನ್ನ ಅಣ್ಣನ ವಿರುದ್ದ ಹಾಕಿದ್ದ ದಾವೆ ವಜಾ ಆದ ಕಾಲದಿಂದಲು ನನ್ನ ಅಣ್ಣ ಶಿವಮಲ್ಲಯ್ಯ ರವರೆ ಸದರಿ ಜಾಗದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸದರಿ ಜಾಗಕ್ಕೆ ಸಂಬಂದಪಟ್ಟಂತೆ ನನ್ನ ಹೆಸರಿನಲ್ಲಿ ಯಾವುದೇ ದಾಖಲೆ ಇಲ್ಲ ಆದರೆ ಒಂದು ಪಾಲುಪಾರಿಕತ್ ದಾಖಲೆ ಇದೆ. ಸದರಿ ಪಾಲುಪಾರಿಕತನ್ನು ನಾನು ಹಾಕಿದ ದಾವೆಯಲ್ಲಿ ಹಾಜರುಪಡಿಸಿರಲಿಲ್ಲ. ಸದರಿ ಪಾಲುಪಾರಿಕತ್ ದಾಖಲೆ ನನ್ನ ದೊಡ್ಡಣ್ಣನ ಬಳಿ ಇತ್ತು ಆದರಿಂದ ಅದನ್ನು ಸದರಿ ದಾವೆಯಲ್ಲಿ ಹಾಜರುಪಡಿಸಿರಲಿಲ್ಲ. ಯಾವುದೇ ರೀತಿ ಪಾಲುಪಾರಿಕತು ಆಗಿರಲಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. 1 ನೇ ಪ್ರತಿವಾದಿ ಹಾಗೂ ನಾವು ಚೆನ್ನಾಗಿದ್ದೇವೆ ಎಂದರೆ ಸರಿ. ಶಿವಮಲ್ಲಯ್ಯ ಹಾಗೂ 1 ನೇ ಪ್ರತಿವಾದಿಯ ನಡುವೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ಚೆನ್ನಾಗಿದ್ದಾರೆ ಎಂದು ನುಡಿದಿದ್ದಾರೆ. ವಾದಿಯ ತಾಯಿ ಸುನಂದಮ್ಮ 1 ನೆ ಪ್ರತಿವಾದಿಯಾದ ಗಂಗಮ್ಮ ಹಾಗೂ ಅವಳ ಗಂಡನಾದ ಬೀರಯ್ಯ ರವರ ಮಗ ಬೀರಯ್ಯನ ಹೆಂಡತಿ ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿ ದಾವಾ ಆಸ್ತಿಯಲ್ಲಿ ಭಾಗಾಂಶ ಕೋರಿ ಹಾಕಿರುತ್ತಾರೆ ಎಂದು ನನಗೆ 4 ನೇ ವಾದಿ ತಿಳಿಸಿರುತ್ತಾರೆ. ಈ ದಾವೆಯನ್ನು ವಾದಿ ಸರ್ವೆ ನಂ.170/ಪಿ80 ಕ್ಕೆ ಸಂಬಂದಪಟ್ಟಂತೆ ಹಾಕಿರುತ್ತಾರೆ. ಗಂಗಮ್ಮ ಮತ್ತು ಬೀರಯ್ಯನ ಮಗ ಬೀರಯ್ಯನಿಗೆ ಮದುವೆಯಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರ ಹೆಂಡತಿ ಹೆಸರು ಗಿರಿಜಮ್ಮ. ಕಾಡನಪುರದದೊಡ್ಡಿಯಲ್ಲಿ ಜಮೀನು ಇರುವುದಿಲ್ಲ. ಆದರೆ ಸರ್ಕಾರದಿಂದ ಮಂಜೂರಾದ ಮನೆ ಇದೆ. ದಾವಾ ಆಸ್ತಿ 1 ನೇ ಪ್ರತಿವಾದಿಯ

ಹೆಸರಿನಲ್ಲಿ ಇದೆ. 1ನೇ ಪ್ರತಿವಾದಿಯ ಹೆಸರಿನಲ್ಲಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. 1ನೇ ಪ್ರತಿವಾದಿ ಮದುವೆಯ ಮೊದಲು ಹಾಗೂ ಮದುವೆಯ ನಂತರ ನಮ್ಮ ಮನೆಯಲ್ಲೆ ವಾಸ ಮಾಡಿಕೊಂಡಿದ್ದರು. 1ನೆ ಪ್ರತಿವಾದಿಯ ಗಂಡ ಬೀರಯ್ಯನಿಗೆ ಯಾವುದೇ ಜಮೀನು ಅಥವಾ ಮನೆ ಇರಲಿಲ್ಲ. ಅವರಿಗೆ ಜೀವನ ಮಾಡಲು ಯಾವುದೆ ಮೂಲ ಇರಲಿಲ್ಲ ಆದ್ದರಿಂದ ನಮ್ಮ ಮನೆಯಲ್ಲಿ ವಾಸ ಮಾಡಿಕೊಂಡಿದ್ದರು. ನನ್ನ ಅಣ್ಣ ಶಿವಮಲ್ಲಯ್ಯ ವಾದಿಯ ಪರವಾಗಿ ಬಂದು ಸಾಕ್ಷಿ ನುಡಿದಿದ್ದಾರೆ ಎಂದರ ನನಗೆ ಗೊತ್ತಿಲ್ಲ. ನಾನು ಮತುತ ನನ್ನ ಅಣ್ಣ ಶಿವಮಲ್ಲಯ್ಯ ಚೆನ್ನಾಗಿದ್ದೇವೆ. ಈ ದಾವೆಯ ಬಗ್ಗೆ ನನಗೆ ಏನು ಗೊತ್ತಿಲ್ಲದಿದ್ದರು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಬೀರಯ್ಯನ ಮಗಳು , ವಾದಿಯ ತಾಯಿ ಸುನಂದಮ್ಮ ಬೀರಯ್ಯನ ಹೆಂಡತಿ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ನಾನು ಸಹಾಯ ಮಾಡುವ ಸಲುವಾಗಿ ವಾದಿ ಬೀರಯ್ಯನ ಮಗಳು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಧ್ಯವಾದರೆ ವಾದಿಗೆ ಮೋಸ ಮಾಡಬೇಕೆಂದು ಪ್ರತಿವಾದಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ